## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

***ಸಿ.ಸಿ.ನಂಃ 348/2018***

ಡಿಡಬ್ಲ್ಯು -1

ಆರೋಪಿ ಸಂಃ 2

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಎ ಶಫೀಕ್ |
| ತಂದೆಯ ಹೆಸರು | ಃ | ಯೂಸುಫ್ |
| ವಯಸ್ಸು | ಃ | 46 ವರ್ಷ |
| ವೃತ್ತಿ | ಃ | ವ್ಯಾಪಾರಿ |
| ವಾಸಸ್ಥಳ | ಃ | ಸಿದ್ದಾಪುರ |

***ದಿನಾಂಕಃ 25.10.2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

ಮುಖ್ಯ ವಿಚಾರಣೆಃ ಶ್ರೀ. ಡಿಸಿಡಿಯವರಿಂದಃ-

ನಾನು ಕಾಫಿ ಮತ್ತು ಕರಿಮೆಣಸಿನ ವ್ಯಾಪಾರವನ್ನು ಸಿದ್ದಾಪುರದಲ್ಲಿ ಮಾಡುತ್ತೇನೆ. ಸದರಿ ವ್ಯಾಪಾರವನ್ನು ಮಾಡಲು ನಾನು ನಮಾಸ್ಕೋ ಇಂಟರ್‌ನ್ಯಾಷನಲ್ ಟ್ರೇಡ್ಸ್ ಅಂಡ್ ಎಕ್ಸ್‌ಪೋರ್ಟ್ಸ್ ಎಂಬ ಅಂಗಡಿಯನ್ನು ಹೊಂದಿದ್ದೇನೆ. ಸದರಿ ವ್ಯಾಪಾರವನ್ನು ನಾವು 4 ಜನ ಪಾಲುದಾರರಾಗಿ ನಡೆಸುತ್ತಿದ್ದೇವೆ. ಈ ಹಂತದಲ್ಲಿ ಆರೋಪಿ ಪರ ವಕೀಲರು ನೊಂದಣಿಯಾಗಿಲ್ಲದ ಪಾಲುದಾರಿಕೆ ಪತ್ರವನ್ನು ನ್ಯಾಯಾಲಯವು ಗುರುತಿಸಬೇಕೆಂದು ಕೋರಿಕೊಂಡಿದ್ದು ನೊಂದಣಿಯಾಗಿಲ್ಲದ ದಾಖಲೆಯನ್ನು ಗುರುತಿಸಲು ಸಾಧ್ಯವಿಲ್ಲ ಎಂದು ಪಾಲುದಾರಿಕೆಯ ಪತ್ರವನ್ನು ಗುರುತಿಸಿರುವುದಿಲ್ಲ, ಸದರಿ ಪಾಲುದಾರಿಕೆಯ ಪತ್ರವು ರಜಾನ್ ಮೊಹಮ್ಮದ್ ಹ್ಯಾರಿಸ್, ಅಬುಬಕ್ಕರ್ ರವರ ಮಧ್ಯೆ ಆಗಿರುತ್ತದೆ. ಸದರಿ ಅಂಗಡಿಯನ್ನು ಹೊಂದಿರುವ ಬಗ್ಗೆ ನಾನು ಸಿದ್ದಾಪುರ ಗ್ರಾಮ ಪಂಚಾಯತಿಗೆ ಕಂದಾಯವನ್ನು ಪಾವತಿ ಮಾಡಿದ್ದು ಕಂದಾಯ ರಶೀತಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ರಶೀತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಅಂಗಡಿಯು ರಜಾನ್ ಮೊಹಮ್ಮದ್ ಹ್ಯಾರಿಸ್‌ರವರ ಹೆಸರಿನಲ್ಲಿ ಇದ್ದು ಅದರ ಪರವಾನಿಗೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ಸಾಕ್ಷಿಯು ಜಿಎಸ್‌ಟಿ ಫಾರಂ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸದರಿ ಅಂಗಡಿಯು 2012 ನೇ ಇಸವಿಯಿಂದ ಇರುತ್ತದೆ. ಕಾಫಿ ಮತ್ತು ಕರಿಮೆಣಸನ್ನು ನಾವು ಪ್ಲ್ಯಾಂಟರ್ಸ್‌ನಿಂದ ಕೊಂಡುಕೊಂಡು ಭಾರತದಾದ್ಯಂತ ಮಾರಾಟ ಮಾಡುತ್ತೇವೆ. ಆದಾಯ ತೆರಿಗೆ ಇಲಾಖೆಯಿಂದ 2018-2019 ನೇ ಇಸವಿಯಲ್ಲಿ ನಮ್ಮ ಕಂಪೆನಿಯಲ್ಲಿ ರೂ. 37,30,33,278.00 ಟರ್ನ್ ಓವರ್ ಮಾಡಿರುತ್ತೇವೆ. ಜನವರಿ 2017 ರಿಂದ ಜುಲೈ 2017 ರವರೆಗೆ ನಾವು ಪ್ಲಾಂಟರ್ಸ್‌ನಿಂದ ಕಾಫಿಯನ್ನು ಕೊಂಡುಕೊಂಡು ಪ್ಲಾಂಟರ್ಸ್‌ಗೆ ನೀಡಿರುವ ಇನ್‌ವಾಯ್ಸ್ ಅನ್ನು

ನೀಡುತ್ತೇವೆ. ಪ್ಲ್ಯಾಂಟರ್ಸ್‌ನಿಂದ ಕಾಫಿ ಮತ್ತು ಕರಿಮೆಣಸನ್ನು ಕೊಂಡುಕೊಂಡು ಅವರಿಗೆ ಬ್ಯಾಂಕಿನ ಮೂಲಕ ಹಣವನ್ನು ಐಸಿಐಸಿಐ ಬ್ಯಾಂಕ್ ಮತ್ತು ಕಾರ್ಪೋರೇಷನ್ ಬ್ಯಾಂಕ್ ನಲ್ಲಿಹುದಿಕೇರಿ ಬ್ರಾಂಚ್‌ನಿಂದ ನೀಡಿರುತ್ತೇವೆ. ಪ್ಲ್ಯಾಂಟರ್ಸ್‌ಗೆ ನಾವು ಹಣವನ್ನು ಆರ್‌ಟಿಜಿಎಸ್ ಮತ್ತು ನೆಫ್ಟ್ ಮೂಲಕ ಹಣವನ್ನು ಪಾವತಿ ಮಾಡುತ್ತೇವೆ. ಯಾರ್‍ಯಾರಿಗೆ ಪಾವತಿ ಮಾಡಿದ್ದೇನೆ ಎಂಬುದನ್ನು ನನ್ನ ಬ್ಯಾಂಕ್ ಸ್ಟೇಟ್‌ಮೆಂಟ್‌ನಲ್ಲಿ ನಮೂದು ಇರುತ್ತದೆ. ಯಾರಿಂದ ಕಾಫಿ ಮತ್ತು ಕರಿಮೆಣಸನ್ನು ಕೊಂಡುಕೊಂಡಿರುತೇವೋ ಅವರಿಗೆ ಇನ್‌ವಾಯ್ಸ್ ಕೊಟ್ಟಿರುತ್ತೇವೆ. ಇನ್‌ವಾಯ್ಸ್ ನೀಡಿದ ನಂತರ ಗ್ರಾಹಕರಿಗೆ ಹಣವನ್ನು ಪಾವತಿ ಮಾಡುತ್ತೇವೆ. ನಾನು ಪ್ಲ್ಯಾಂಟರ್ಸ್‌ಗೆ ದಿಃ 2.7.2017 ರಿಂದ 14.7.2017 ಪ್ಲ್ಯಾಂಟರ್ಸ್‌ನಿಂದ ಕಾಫಿ ಮತ್ತು ಕರಿಮೆಣಸನ್ನು ಕೊಂಡುಕೊಂಡಿರುವ ಬಗ್ಗೆ ಇನ್‌ವಾಯ್ಸ್ ಅನ್ನು ನೀಡಿರುತ್ತೇನೆ. ಅದರಂತೆ ಮಾಸಿಕವಾಗಿ ಸೇಲ್ಸ್‌ಟ್ಯಾಕ್ಸ್ ಅನ್ನು ಸರ್ಕಾರಕ್ಕೆ ಪಾವತಿ ಮಾಡುತ್ತೇನೆ. ಅದಕ್ಕೆ ನಾನು ಸೇಲ್ಸ್‌ಟ್ಯಾಕ್ಸ್‌ನ ಸ್ಟೇಟ್‌ಮೆಂಟ್ ಅನ್ನು ಹೊಂದಿರುತ್ತೇನೆ.

ಡಿಡಬ್ಲ್ಯೂ-1 ರವರು ನಿಮ್ಮ ಮೂಲಕ ಹಾಜರುಪಡಿಸಿರುವ ಎಲ್ಲಾ ದಾಖಲಾತಿಗಳು ಜೆರಾಕ್ಸ್ ಪ್ರತಿಯಾದ ಕಾರಣ ಈ ನ್ಯಾಯಾಲಯ ಗುರುತಿಸಿರುವುದಿಲ್ಲ. ಗ್ರಾಹಕರಿಂದ ನಾವು ಖರೀದಿ ಮಾಡಿದ ಕಾಫಿ ಮತ್ತು ಕರಿಮೆಣಸನ್ನು ಚೆನ್ನಯ್ಯನಕೋಟೆಯಲ್ಲಿರುವ ರುಕಿಯಾ ಬಿ ರವರ ಗೋದಾಮಿನಲ್ಲಿ ಇಡುತ್ತೇವೆ. ಚೆನ್ನಯ್ಯನಕೋಟೆಯಲ್ಲಿ ನಮಾಸ್ಕೋ ಇಂಟರ್‌ನ್ಯಾಷನಲ್ ಟ್ರೇಡರ್ಸ್ ಎಕ್ಸ್‌ಪೋರ್ಟ್ಸ್ ಗೋಡಾನ್ ಇರುವ ಬಗ್ಗೆ ವಾಣಿಜ್ಯ ತೆರಿಗೆಯವರು ನೀಡಿರುವ ಒಂದು ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-3 ಎಂದು ಗುರುತಿಸಲಾಯಿತು.

ನನಗೆ ಆರೋಪಿ 1 ರವರ ಪರಿಚಯ ಇದೆ. ಆರೋಪಿ 1 ರವರು ಮಾಲ್ದಾರೆಯ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದ. ನಾನು ಮಾಲ್ದಾರೆಯ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 2014 ರಿಂದ 2017 ರವರೆಗೆ ಕರಿಮೆಣಸು ಮತ್ತು ಕಾಫಿಯನ್ನು ದಾಸ್ತಾನು ಮಾಡುತ್ತಿದ್ದೆ. ನಾನು ಸದರಿ ಸಂಘದ ಖಾಯಂ ಗ್ರಾಹಕ. ನನ್ನ ಹೆಸರಿನಲ್ಲಿ ನಾನು ದಾಸ್ತಾನು ಇಡುತ್ತಿದ್ದೆ. ಆರೋಪಿ 1 ರವರು ಸದರಿ ಮಾಲ್ದಾರೆಯ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 7,345 ಕೆ ಜಿ ಕರಿಮೆಣಸನ್ನು ಅಂದರೆ 104 ಚೀಲ ಅವ್ಯವಹಾರ ಮಾಡಿರುವ ಬಗ್ಗೆ ಫಿರ್ಯಾದು ದಾಖಲಾಗಿರುತ್ತದೆ. ಸದರಿ ಸಂಘದ ಅಧ್ಯಕ್ಷರು ಆರೋಪಿ 1 ರವರ ಮೇಲೆ ಫಿರ್ಯಾದನ್ನು ನೀಡಿರುತ್ತಾರೆ.

ಆರೋಪಿ 1 ರವರು ಸದರಿ ಸಂಘದಲ್ಲಿ 104 ಚೀಲ ಕರಿಮೆಣಸನ್ನು ದುರುಪಯೋಗ ಮಾಡಿ ನಮಗೆ ನೀಡಿದ್ದಾರೆ ಎಂದು ಫಿರ್ಯಾದು ನೀಡಿದ್ದರು. ಆರೋಪಿ 1 ರವರು ಸದರಿ ಕರಿಮೆಣಸನ್ನು ನಮಗೆ ನೀಡಿರುವುದಿಲ್ಲ. ನಾನೂ ಕೂಡಾ ಸದರಿ ಬ್ಯಾಂಕಿನ ಸದಸ್ಯನಾಗಿರುತ್ತೇನೆ. ಸದರಿ ಬ್ಯಾಂಕಿನಲ್ಲಿ ಇಟ್ಟಿರುವ ದಾಸ್ತಾನನ್ನು ಮಾಸಿಕವಾಗಿ ಪರಿಶೀಲನೆ ಮಾಡುತ್ತಾರೆ. ಬ್ಯಾಂಕಿನ ಅಧ್ಯಕ್ಷರು ನೀಡಿರುವ ಫಿರ್ಯಾದಿನಲ್ಲಿ ಯಾವ ದಿನಾಂಕದಂದು ಯಾವ ತಿಂಗಳಿನಂದು ಆರೋಪಿ 1 ರವರು ಸದರಿ ಕರಿಮೆಣಸನ್ನು ದುರುಪಯೋಗ ಮಾಡಿ ನಮಗೆ ಕೊಟ್ಟಿರುತ್ತಾರೆ ಎಂದು ನಮಗೆ ಗೊತ್ತಿರುವುದಿಲ್ಲ. ಆರೋಪಿ 1 ರವರು ದುರುಪಯೋಗಪಡಿಸಿದ್ದಾರೆ ಎಂದು ಹೇಳಲಾದ 104 ಚೀಲ ಕರಿಮೆಣಸನ್ನು ದಿಃ 6.7.2017 ರಂದು ಸಮಯ ಸುಮಾರು 5.30 ಗಂಟೆಗೆ ಮಡಿಕೇರಿಯ ಡಿಸಿಐಬಿ

ಕ್ರೈಂ ಬ್ರಾಂಚ್‌ನವರು ಬಂದು ಒಬ್ಬ ಪೋಲೀಸ್ ಪೇದೆ ಬಂದು ಇಲ್ಲಿ ಶಫಿ ಯಾರು ಎಂದು ಇನ್ಸ್‌ಪೆಕ್ಟರ್‌ರವರು ಕೇಳುತ್ತಿದ್ದಾರೆ ಎಂದು ಕೇಳಿದಾಗ ನಾನು ಹೋಗಿ ನೋಡಲಾಗಿ ಸದರಿ ಇನ್ಸ್‌ಪೆಕ್ಟರ್‌ರವರು ಜೀಪಿನಲ್ಲಿ ಕುಳಿತ್ತಿದ್ದು ನನ್ನನ್ನು ಕರೆದುಕೊಂಡು ಮಡಿಕೇರಿಗೆ ಹೋಗಿರುತ್ತಾರೆ. ಅ ಸಂಧರ್ಭದಲ್ಲಿ ಪೋಲೀಸರು ನನಗೆ ಆರೋಪಿ 1 ರವರನ್ನು ತೋರಿಸಿರುತ್ತಾರೆ. ಆಗ ನಾನು ಪೋಲೀಸರಿಗೆ ಆರೋಪಿ 1ರವರು ನನಗೆ ಪರಿಚಯಸ್ಥರು ಎಂದು ತಿಳಿಸಿರುತ್ತೇನೆ. ಆ ಸಂಧರ್ಭದಲ್ಲಿ ಪೋಲೀಸರು ಆರೋಪಿ 1 ರವರು ಮಾಲ್ದಾರೆ ಸಹಕಾರ ಸಂಘದಲ್ಲಿ ಕರಿಮೆಣಸನ್ನು ದುರುಪಯೋಗಪಡಿಸಿರುವುದಾಗಿ ತಿಳಿಸಿರುತ್ತಾರೆ. ಆರೋಪಿ 1 ರವರು ನಿಮಗೆ 104 ಚೀಲ ಕರಿಮೆಣಸನ್ನು ನೀಡಿರುವುದಾಗಿ ತಿಳಿಸಿರುತ್ತಾನೆ. ನಾನು ಅದಕ್ಕೆ ತಕರಾರು ತೆಗೆದು ಆ ರೀತಿ ಯಾವುದೇ ಚೀಲಗಳನ್ನು ನನಗೆ ನೀಡಿರುವುದಿಲ್ಲ ಎಂದು ತಿಳಿಸಿರುತ್ತೇನೆ. ಆ ಸಂಧರ್ಭದಲ್ಲಿ ಪೋಲೀಸರು ನಮ್ಮ ಗೋಡಾನ್‌ಗೆ ಬಂದು ಪರಿಶೀಲನೆ ಮಾಡಲು ತಿಳಿಸಿರುತ್ತಾರೆ. ನಂತರ ರಾತ್ರಿ 11-00 ಗಂಟೆ ಸಮಯದಲ್ಲಿ ಪೋಲೀಸರು ನಮ್ಮ ಗೋಡಾನ್‌ಗೆ ಬಂದು ಪರಿಶೀಲನೆ ಮಾಡಿರುತ್ತಾರೆ.

ಆ ಸಂಧರ್ಭದಲ್ಲಿ ನಮ್ಮ ಗೋಡಾನ್‌ನಲ್ಲಿ 20,90,905 ಕೆ ಜಿ ಕರಿಮೆಣಸು ಇತ್ತು, ಆ ಸಮಯದಲ್ಲಿ ಪೋಲೀಸರು ನಿಮ್ಮ ಗೋಡಾನ್‌ನಲ್ಲಿ ಇರುವ ಕರಿಮೆಣಸಿನಲ್ಲಿ 7,340 ಕೆ ಜಿ ಆರೋಪಿಗೆ ಸೇರಿದ್ದು ಎಂದು ತಿಳಿಸಿ ಅದನ್ನು ಅಮಾನತ್ತುಪಡಿಸಿರುತ್ತಾರೆ. ಆ ಸಂಧರ್ಭದಲ್ಲಿ ಸದರಿ ಕರಿಮೆಣಸನ್ನು ಚೀಲಗಳಿಗೆ ತುಂಬಿರುವುದಿಲ್ಲ, ಅದನ್ನು ರಾಶಿಯಾಗಿ ಹಾಕಿರುತ್ತೇವೆ. ಆ ಸಂಧರ್ಭದಲ್ಲಿ ಪೋಲೀಸರಿಗೆ ಇದಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳು ನನ್ನ ಬಳಿ ಇದೆ ಎಂದು ತಿಳಿಸಿರುತ್ತೇನೆ. ಆದರೆ ಪೋಲೀಸರು ನನ್ನ ಯಾವುದೇ ಮಾತುಗಳನ್ನು ಕೇಳದೆ ಮತ್ತು ದಾಖಲೆಗಳನ್ನು ಪರಿಶೀಲಿಸದೆ ಸದರಿ ಕರಿಮೆಣಸನ್ನು ನಮ್ಮ ಗೋಡಾನ್‌ನ ಪಕ್ಕದಲ್ಲಿ ಚೀಲಗಳನ್ನು ತಂದು 104 ಚೀಲಗಳಿಗೆ ತುಂಬಿ ಅಮಾನತ್ತುಪಡಿಸಿರುತ್ತಾರೆ. ನಂತರ ಸದರಿ ಅಮಾನತ್ತುಪಡಿಸಿದ 104 ಚೀಲಗಳನ್ನು ನಮ್ಮ ಡ್ರೈವರ್ ಆದ ಅಶ್ರಫ್‌ರವರು ನನಗೆ ಸೇರಿದ ಈಚರ್ ಗಾಡಿಯನ್ನು ತರಿಸಿ ಅದನ್ನು ತುಂಬಿಸಿ ಮಡಿಕೇರಿಗೆ ತೆಗೆದುಕೊಂಡು ಹೋಗಿರುತ್ತಾರೆ.

ನಂತರ ನಾನು ರಾತ್ರಿ 1-30 ಗಂಟೆಗೆ ನಮ್ಮ ಮನೆಗೆ ಹೋಗಿರುತ್ತೇನೆ. ಮರುದಿನ ಬೆಳಿಗ್ಗೆ ಪೋಲೀಸರು ನನಗೆ ಮಡಿಕೇರಿಗೆ ಬರುವಂತೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ನಂತರ ದಿಃ 7.7.2017 ರಂದು ಮಡಿಕೇರಿಗೆ ಹೋಗಿದ್ದ ಸಂದರ್ಭದಲ್ಲಿ ಪೋಲೀಸರು ಸದರಿ ಮಾಲನ್ನು ಅಮಾನತ್ತುಪಡಿಸಿ ಮಹಜರು ಕ್ರಮವನ್ನು ಜರುಗಿಸಿ ಅದಕ್ಕೆ ಸಹಿ ಮಾಡಲು ತಿಳಿಸಿರುತ್ತಾರೆ. ಸದರಿ ಮಹಜರಿಗೆ ಸಾಕ್ಷಿದಾರರಾಗಿ ನಾನು, ನಮ್ಮ ಡ್ರೈವರ್ ಆದ ಅಶ್ರಫ್, ಆಸಿಫ್‌ರವರು ಸಹಿ ಮಾಡಿರುತ್ತೇವೆ. ದಿಃ 7.7.2017 ರಂದು ಮಾಡಿರುವ ಅಮಾನತ್ತು ಮಹಜರಿಗೆ ನಾನು ಸಾಕ್ಷಿದಾರನಾಗಿರುತ್ತೇನೆ. ಸದರಿ ಮಹಜರನ್ನು ಬೆಃ 10.30 ಗಂಟೆಗೆ ಮಾಡಿರುತ್ತಾರೆ. ನಂತರ ಅಮಾನತ್ತು ಮಾಡಲಾದ ಮಾಲನ್ನು ಬಿಡುಗಡೆ ಮಾಡುವಂತೆ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಮಾಲನ್ನು ಬಿಡುಗಡೆ ಮಾಡುವಂತೆ ಫಿರ್ಯಾದಿ ಮಾಲ್ದಾರೆ ಕೃಷಿ ಪತ್ತಿನ ಸಹಕಾರ ಸಂಘದವರೂ ಕೂಡಾ ಅರ್ಜಿಯನ್ನು ಸಲ್ಲಿಸಿದ್ದರು. ಆದರೆ ಈ ನ್ಯಾಯಾಲಯವು ನಮ್ಮ ಇಬ್ಬರ ಅರ್ಜಿಗಳನ್ನು ವಜಾ ಮಾಡಿತ್ತು,

ನಂತರ ಸದರಿ ಆದೇಶವನ್ನು ಪ್ರಶ್ನಿಸಿ ಮಡಿಕೇರಿ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇವೆ. ಆ ಸಂದರ್ಭದಲ್ಲಿ ಮಡಿಕೇರಿ ಜಿಲ್ಲಾ ನ್ಯಾಯಾಲಯವು ಫಿರ್ಯಾದಿದಾರರಿಗೆ ಮದ್ಯಂತರ ಸ್ವಾಧೀನ ನೀಡಿರುತ್ತದೆ. ನಂತರ ನಾವು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಜಿಲ್ಲಾ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುತ್ತೇವೆ. ಆ ಸಂಧರ್ಭದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಬಾಂಡ್ ಆಧಾರದ ಮೇಲೆ ಸದರಿ ಸೊತ್ತನ್ನು ಫಿರ್ಯಾದಿದಾರರ ವಶಕ್ಕೆ ನೀಡಲು ಸಾದ್ಯವಿಲ್ಲ ಬ್ಯಾಂಕ್ ಗ್ಯಾರಂಟಿ ನೀಡಬೇಕು ಎಂದು ತಿಳಿಸಿರುತ್ತಾರೆ. ನಂತರ ವಿಚಾರಣೆ ನ್ಯಾಯಾಲಯವು ಆದೇಶವನ್ನು ನೀಡುವ ಸಮಯದಲ್ಲಿ ಅದರ ನೈಜ ಮಾಲೀಕ ಯಾರು ಎಂಬುದನ್ನು ಪರಿಗಣಿಸಬೇಕೆಂದು ನಿರ್ದೇಶಿಸಿರುತ್ತದೆ.

ಪೋಲೀಸರು ಮಾಲನ್ನು ಅಮಾನತ್ತುಪಡಿಸುವ ಸಮಯದಲ್ಲಿ ನನಗೆ ಬೆದರಿಕೆಯನ್ನು ನೀಡಿರುತ್ತಾರೆ. ನಮ್ಮ ಸಂಸ್ಥೆಯು ಗೌರವಯುತವಾದ ಸಂಸ್ಥೆಯಾದ ಕಾರಣ ಅದರ ಹೆಸರು ಹಾಳಾಗ ದಿರಲೆಂಬ ಕಾರಣದಿಂದ ನಾನು ಫಿರ್ಯಾದನ್ನು ನೀಡಿರುವುದಿಲ್ಲ. ನಂತರ ಸಾಕ್ಷಿ ಮುಂದುವರಿದು ದಿಃ 7.7.2017 ರಂದು ಜರುಗಿಸಿದ ಅಮಾನತ್ತು ಮಹಜರಿನಲ್ಲಿ ನನ್ನನ್ನು ಸಾಕ್ಷಿದಾರರನ್ನಾಗಿ ಸೇರಿಸಿದ ಕಾರಣ ನಾನು ಫಿರ್ಯಾದನ್ನು ನೀಡಿರುವುದಿಲ್ಲ. ಆದ ಕಾರಣ ಮಾಲನ್ನು ಬಿಡುಗಡೆ ಮಾಡುವಂತೆ ನಾನು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಆ ಸಮಯದಲ್ಲಿ ನಾನು ಸಾಕ್ಷಿದಾರನಾಗಿದ್ದು ಈಗ ನನ್ನನ್ನು ಆರೋಪಿಯನ್ನಾಗಿ ಪೋಲೀಸರು ಸೇರಿಸಿರುತ್ತಾರೆ. ನನ್ನ ಡ್ರೈವರ್ ಮತ್ತು ನನ್ನ ಸಹಾಯಕರು ಈ ಪ್ರಕರಣದಲ್ಲಿ ಸಾಕ್ಷಿದಾರರು ಎಂದರೆ ಸರಿ. ದಿಃ 3.3.2017 ರಂದು ಸದರಿ ಫಿರ್ಯಾದಿಯವರ ಕೃಷಿ ಸಹಕಾರ ಪತ್ತಿನಲ್ಲಿ ಕರಿಮೆಣಸು ದುರುಪಯೋಗ ಆಗಿರುವ ಬಗ್ಗೆ ತಿಳಿದಿರುತ್ತದೆ.

ಚಾಸಾ-6 ಮತ್ತು ಚಾಸಾ-8 ರವರು ಸದರಿ ಮಾಲ್ದಾರೆಯ ಕೃಷಿ ಸಹಕಾರ ಪತ್ತಿನಲ್ಲಿ ಕರಿಮೆಣಸನ್ನು ದಾಸ್ತಾನು ಮಾಡಿದ 104 ಚೀಲ ಕರಿಮೆಣಸನ್ನು ಹಿಂಪಡೆಯಲು ಹೋದಾಗ ಅದು ಕಂಡು ಬರದ ಕಾರಣ ಗೊತ್ತಿರುತ್ತದೆ. ಅವರು ದಿಃ 3.3.2017 ರಂದು ಸದರಿ ಬ್ಯಾಂಕ್‌ನ ಅಧ್ಯಕ್ಷರಿಗೆ ಫಿರ್ಯಾದನ್ನು ನೀಡಿರುತ್ತಾರೆ. ದಿಃ 28.2.2017 ರಂದು ಸದರಿ ಮಾಲ್ದಾರೆ ಕೃಷಿ ಸಹಕಾರಿ ಪತ್ತಿನ ದಾಸ್ತಾನನ್ನು ಪರಿಶೀಲನೆ ಮಾಡಿದ್ದರು. ಸದರಿ ಪರಿಶೀಲನೆಯನ್ನು ಸಂಘದ ಸಿಬ್ಬಂದಿಯವರೇ ಮಾಡಿರುತ್ತಾರೆ. ದಿಃ 1.3.2017 ರಂದು ಬುಧವಾರ ಸಂಘದ ರಜೆಯಾಗಿತ್ತು. ದಿಃ 2.3.2017 ರಂದು ಆರೋಪಿ 1 ರವರು ಸಂಘಕ್ಕೆ ರಜೆಯನ್ನು ಹಾಕಿರುತ್ತಾರೆ.

ನಂತರ ಅದೇ ದಿನ ಸುಮಾರು 6 ಲಕ್ಷ ಮಾಲ್ಯದ ರಸಗೊಬ್ಬರ ದುರುಪಯೋಗವಾಗಿರುವ ಬಗ್ಗೆ ಗೊತ್ತಿರುತ್ತದೆ. ಆದರೆ ದಿಃ 1.4.2017 ರಂದು ಬ್ಯಾಂಕಿನ ಅಧ್ಯಕ್ಷರು ಪೋಲೀಸ್ ಠಾಣೆಗೆ ಫಿರ್ಯಾದನ್ನು ನೀಡಿರುತ್ತಾರೆ. ಸದರಿ ಪುಕಾರಿನಲ್ಲಿ 7,345 ಕರಿಮೆಣಸು ದುರುಪಯೋಗವಾಗಿರುವ ಬಗ್ಗೆ ಮಾತ್ರ ನಮೂದು ಇದ್ದು ಅಂದಾಜು 6 ಲಕ್ಷ ಮೌಲ್ಯದ ರಸಗೊಬ್ಬರ ದುರುಪಯೋಗವಾಗಿರುವ ಬಗ್ಗೆ ಫಿರ್ಯಾದಿನಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ.

**( ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಶ್ರೀ ಡಿಸಿಡಿ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
***(ಕೋನಪ್ಪ ಎನ್.ವಿ)***
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ವಿರಾಜಪೇಟೆ

CC No.